# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| ಜೆ.ಎಂ.ರತ್ನಮ್ಮ ಗಂಡ ಲೇಟ್ ತ್ರಿನೇತ್ರ,<br>ಗದ್ದಿಕೇರಿ ಗ್ರಾಮ, ಹೆಚ್.ಬಿ.ಹಳ್ಳಿ ತಾ. | ಮಡಿವಾಳರ ಚನ್ನಪ್ಪ ತಂದೆ ಲೇಟ್ ನೀಲಪ್ಪ,<br>ಹಿರೇಮಲ್ಲನಕೇರಿ ಗ್ರಾಮ, ಹಡಗಲಿ ತಾ. |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಹಿರೇಮಲ್ಲನಕೇರಿ | 148/ಬಿ/1 | 2–55 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಹಿರೇಮಲ್ಲನಕೇರಿ ಗ್ರಾಮದ ಸ.ನಂ.148/ಬಿ/1 ಪೈಕಿ ವಿ:2–55 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಗದ್ದಿಕೇರಿ ಗ್ರಾಮದ ನಿವಾಸಿಯಾದ ಜೆ.ಎಂ.ರತ್ನಮ್ಮ ಗಂಡ ಲೇಟ್ ತ್ರಿನೇತ್ರ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿ:24–04–2015 ರಂದು ಅರ್ಜಿ ಸಲ್ಲಿಸಿದರು. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ:30–04–2015 ರಂದು ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿ:22–05–2015 ರಂದು ಹಿರೇಮಲ್ಲನಕೇರಿ ಗ್ರಾಮದ ನಿವಾಸಿಯಾದ ಮಡಿವಾಳರ ಚನ್ನಪ್ಪ ತಂದೆ ಲೇಟ್ ನೀಲಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿರವರು M.NO.111/2014-15 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿನಾಂಕ 01–07–2015 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ತಾವು ಸದರಿ ಜಮೀನನ್ನು ಖರೀದಿ ಮಾಡಿದ್ದು, ತಮ್ಮ ಹೆಸರಿಗೆ ನೋಂದಣಿಯಾಗಿರುವುದಿಲ್ಲ. ತಾವು ಖರೀದಿಸಿದ ಬಗ್ಗೆ ಖರೀದಿ ಪತ್ರಗಳನ್ನು ಈಗಾಗಲೇ ಸಲ್ಲಿಸಿರುವುದಾಗಿ ತಿಳಿಸಿದರು. ಅರ್ಜಿದಾರರು ತಮ್ಮ ಗಂಡನು ಮರಣ ಹೊಂದಿದ್ದರಿಂದ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುವುದಾಗಿ ತಿಳಿಸಿದರು.

ಅರ್ಜಿದಾರರು ಮತ್ತು ತಕರಾರುದಾರರು ಸಲ್ಲಿಸಿದ ದಾಖಲೆಗಳು ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಹಾಲಿ ಪಹಣಿಯಲ್ಲಿ ಒಟ್ಟು ವಿಸ್ತೀರ್ಣ 4–55 ಎಕರೆ ಪೈಕಿ ವಿಸ್ತೀರ್ಣ 2–55 ಎಕರೆ ಜಮೀನು ಸಾವಿತ್ರಮ್ಮ ತಾಯಿ ಕೊಟ್ರವ್ವ, ಅಮರೇಶ ತಂದೆ ಪಂಪಯ್ಯ, ತಿನೇತ್ರ ತಂದೆ ಪಂಪಯ್ಯ ಇವರ ಹೆಸರಿಗೆ ಜಂಟಿ ನಮೂದು ಇರುತ್ತದೆ. ಅರ್ಜಿದಾರರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಜೆ.ಎಂ.ತ್ರಿನೇತ್ರ ತಂದೆ ಪಂಪಯ್ಯ ಇವರು ದಿ:01-01–2013 ರಂದು ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿದ ವಂಶವೃಕ್ಷ ಪ್ರಕಾರ ಅರ್ಜಿದಾರರು ತ್ರಿನೇತ್ರ ಇವರ ಪತ್ನಿಯಾಗಿರುತ್ತಾರೆ. ತಕರಾರುದಾರರು ಸಲ್ಲಿಸಿದ ನೋಂದಾಯಿತವಲ್ಲದ ಖಂಡಿತ ಕ್ರಯ ಪತ್ರವನ್ನು ಸಲ್ಲಿಸಿದ್ದು, ದಿನಾಂಕ 3-2–1996 ರಂದು ಮಡಿವಾಳರ ನೀಲಪ್ಪನ ಮಗ ಮಡಿವಾಳರ ನಿಂಗಪ್ಪನಿಗೆ ಅಮರೇಶ, ತ್ರಿನೇತ್ರ, ಸಾವಿತ್ರಮ್ಮ ಇವರು ಖಂಡಿತ ಕ್ರಯಕ್ಕೆ ನೀಡಿರುತ್ತಾರೆ. ತಂದನಂತರ ಮತ್ತೆ ಎರಡು ಬಾರಿ ಖಂಡಿತ ಕರಾರು ಪತ್ರ ಬರೆಸಿರುತ್ತಾರೆ. ಈ ಮೂರು ಪತ್ರಗಳು ನೋಂದಾವಣೆಯಾಗಿರುವುದಿಲ್ಲ. ವಿಚಾರಣೆ ವೇಳೆ ತಕರಾರುದಾರರು ತಾವು ಸದರಿ ಜಮೀನನ್ನು ಖರೀದಿ ಮಾಡಿದ್ದು, ತಮ್ಮ ಹೆಸರಿಗೆ ನೋಂದಣಿಯಾಗಿರುವುದಿಲ್ಲ. ತಾವು ಖರೀದಿಸಿದ ಬಗ್ಗೆ ಖರೀದಿ ಪತ್ರಗಳನ್ನು ಈಗಾಗಲೇ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿ ಖಂಡಿತ ಕ್ರಯ ಮಾಡಿಕೊಂಡ ನಂತರ ಇದೂವರೆಗೂ ಕ್ರಯದಾರರು ತಮ್ಮ ಹೆಸರಿಗೆ ಹಕ್ಕು ಬದಲಾವಣೆಯನ್ನು ಮಾಡಿಕೊಂಡಿರುವುದಿಲ್ಲ. ಖಂಡಿತ ಕರಾರು ಪತ್ರದ ಕುರಿತು ನಿರ್ಣಯಿಸುವ ಅಧಿಕಾರವು ಈ ನ್ಯಾಯಾಲಯದ ವ್ಯಾಪ್ತಿಗೆ ಮೀರಿದ ವಿಷಯವಾಗಿರುತ್ತದೆ. ತಕರಾರುದಾರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸಾಭೀತುಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/04/2015–16 ದಿನಾಂಕ:03–08–2016

## ಆದೇಶ

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M.NO.111/2014-15 ರ ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸುತ್ತಾ, ತ್ರಿನೇತ್ರ ತಂದೆ ಪಂಪಯ್ಯ ಇವರ ಹೆಸರನ್ನು ಕಡಿಮೆ ಮಾಡಿ ಅರ್ಜಿದಾರರಾದ ಜೆ.ಎಂ.ರತ್ನಮ್ಮ ಗಂಡ ಲೇಟ್ ತ್ರಿನೇತ್ರ ಇವರ ಹೆಸರಿಗೆ ಚೆಕ್‌ಲಿಸ್ಟ್ ಪ್ರಕಾರ ಉಳಿದ ಹೆಸರುಗಳೊಂದಿಗೆ ಜಂಟಿಯಾಗಿ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ತಕರಾರುದಾರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸಾಭೀತುಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ, ಇಟ್ಟಗಿ.
ಇಟ್ಟಿಗಿ.

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.